Spl.C. 3/2020.

## 2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬಾಗಲಕೋಟೆ, ಇವರ ನ್ಯಾಯಾಲಯದಲ್ಲಿ.

**ವಿಶೇಷ ಸತ್ರ ಮೊಕದ್ದಮೆ ಸಂಖ್ಯೆ 3/2020.**

| | | | |
|---|---|---|---|
| ಹೆಸರು | : | ಮುರ್ತುಜ ಮುಲ್ಲಾ | ಫ್ರಾಸಾ-21 |
| ತಂದೆಯ ಹೆಸರು | : | ಹುಸೇನಸಾಬ | ಚಾಸಾ-35 |
| ವಯಸ್ಸು | : | 48 ವರ್ಷ | |
| ಉದ್ಯೋಗ | : | ಖಾಸಗಿ ಗುತ್ತಿಗೆದಾರ | |
| ವಾಸಸ್ಥಳ | : | ಧಾರವಾಡ | |

ದಿನಾಂಕಃ 07-08-2024 ರಂದು ಸಾಕ್ಷಿಗೆ ಸತ್ಯ ಪ್ರತಿಜ್ಞೆ ಭೋಧಿಸಲಾಯಿತು.

**ಮುಖ್ಯ ವಿಚಾರಣೆಃ ವಿಶೇಷ ಸರಕಾರಿ ಅಭಿಯೋಜಕರಿಂದ.**

ಆರೋಪಿತರು ಪರಿಚಯವಿಲ್ಲ. ಚಾಸಾ-1 ರಿಂದ 4 ಪರಿಚಯವಿಲ್ಲ. ಈಗ 5-6 ವರ್ಷಗಳ ಹಿಂದೆ ಪೋಲಿಸರು ಠಾಣೆಗೆ ಕರೆಯಿಸಿದ್ದರು ಘಟನೆ ವಿಷಯವಾಗಿ ಕೇಳಿದರು ನನಗೆ ಘಟನೆ ಬಗ್ಗೆ ಯಾವುದೇ ವಿಷಯ ಗೊತ್ತಿರಲಿಲ್ಲ ಆದ್ದರಿಂದ ಗೊತ್ತಿಲ್ಲ ಎಂದು ಹೇಳಿದ್ದೆ. ನಾನು ಮುಧೋಳದಲ್ಲಿ ಕರಾಟೆ ಕ್ಲಾಸ ನಡೆಸುತ್ತಿದ್ದೆ. 30 ರಿಂದ 40 ಜನ ವಿದ್ಯಾರ್ಥಿಗಳಿದ್ದರು. ನಾನು ಕರಾಟೆ ಕ್ಲಾಸನ್ನು ಸಂಜೆ ತೆಗೆದುಕೊಳ್ಳುತಿದ್ದೇನೆ ಬೆಳಗ್ಗೆ ತೆಗೆದುಕೊಳ್ಳುವುದಿಲ್ಲ. ಘಟನೆ ಬಗ್ಗೆ ನನಗೆ ಮಾಹಿತಿ ಇಲ್ಲ. ರೇಖಾ ಎನ್ನುವವಳು ನನ್ನ ವಿದ್ಯಾರ್ಥಿನಿ ಹೌದೋ ಅಲ್ಲವೋ ನನಗೆ ಹೇಳಲು ಬರುವುದಿಲ್ಲ.

(ಈ ಹಂತದಲ್ಲಿ ಸಾ.ಅ.ರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟಿಸವಾಲು ಮಾಡಲು ಅನುಮತಿ ಕೋರಿದ್ದರಿಂದ, ಕಡತವನ್ನು ಪರಿಶೀಲಿಸಲಾಗಿ ಸಾಕ್ಷಿಯು ಪ್ರತಿಕೂಲ ಸಾಕ್ಷ್ಯ ನೀಡಿರುವುದು ಮನದಟ್ಟಾಗಿರುವುದರಿಂದ, ಕೋರಿರುವ ಅನುಮತಿಯನ್ನು ನೀಡಲಾಯಿತು)

**ಪಾಟಿಸವಾಲುಃ ವಿಶೇಷ ಸಾರ್ವಜನಿಕ ಅಭಿಯೋಜಕರಿಂದ.**

ರೇಖಾ ಅಲಿಯಾಸ್ ರೇಣುಕಾ ತಳಗೇರಿ ನನ್ನ ಹತ್ತಿರ ಕರಾಟೆ ಕ್ಲಾಸಗೆ ಬಂದು ಹೋಗುತ್ತಿದ್ದಳು ಎಂದು ಸೂಚಿಸುವುದು ಸರಿಯಲ್ಲ. ಘಟನೆ ಬಗ್ಗೆ ದಿನಾಂಕಃ 15.10.2019 ರಂದು ಬೆಳಗ್ಗೆ 10.30 ರಿಂದ 11.00 ಗಂಟೆವರೆಗೆ ಕುಮಾರಿ ರೇಖಾ ಅಲಿಯಾಸ್ ರೇಣುಕಾ ತಳಗೇರಿ ಇವರು ಕರಾಟೆ ಕ್ಲಾಸಗೆ ಬಂದು 2.30 ಗಂಟೆಗೆ ಕ್ಲಾಸ ಮುಗಿಸಿಕೊಂಡು ಸಯ್ಯದಸಾಬ ನದಾಫ್ ಇವರ ಆಟೋ ರಿಕ್ಷಾದಲ್ಲಿ

ಬಂದು ಹೋಗಿದ್ದಾರೆ ಎಂದು ಸೂಚಿಸುವುದು ಸರಿಯಲ್ಲ. ದಿನಾಂಕಃ 30-11-2019 ರಂದು ಈಗ ಓದಿ ಹೇಳಿದ ನಿಪಿ-48 ರಂತೆ ಪೋಲಿಸರ ಮುಂದೆ ಹೇಳಿಕೆ ನೀಡಿದ್ದೇನೆ ಎನ್ನುವುದು ಸರಿಯಲ್ಲ. ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎನ್ನುವುದು ಸರಿಯಲ್ಲ.

(ಆರೋಪಿ ಪರ ವಕೀಲರ ಕೋರಿಕೆಯ ಮೇರೆಗೆ ಪಾಟೀ ಸವಾಲು ಇಲ್ಲ ಅಂತಾ ತೆಗೆದುಕೊಳ್ಳಲಾಯಿತು)

**ಮರು ವಿಚಾರಣೆ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)
ಓ.ಹೇ.ಕೇ. ಸರಿ ಅದೆ.

07-08-2024.
2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬಾಗಲಕೋಟೆ.